ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ 191 ಪಶುವೈದ್ಯಾಧಿಕಾರಿಗಳ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ : ಪಸಂಮೀ : 116 : ಪಸಸೇ : 2003 : ದಿನಾಂಕ : 30-05-2005 ರಲ್ಲಿ ಸಕ್ರಮಗೊಳಿಸಲಾಗಿದೆ.

250 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿಯ ನಿಯಮದಡಿ ಭರ್ತಿ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಪಶುವೈದ್ಯಕೀಯ ಮೇಲ್ವಿಚಾರಕರನ್ನು, ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿಯ ಮೂಲಕ ಭರ್ತಿ ಮಾಡಬೇಕಾಗಿದ್ದು ಇಲಾಖಾ ಮುಂಬಡ್ತಿ ಸಭೆ ದಿನಾಂಕ : 29-06-2005 ರಂದು ನಡೆಸಲಾಗಿದೆ.

ಪಶುವೈದ್ಯಕೀಯ ಪರೀಕ್ಷಕರನ್ನು 50 : 50 ಅನುಪಾತದಲ್ಲಿ ನೇರ ನೇಮಕಾತಿ ಹಾಗೂ ಮುಂಬಡ್ತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

150 ಪಶುವೈದ್ಯಕೀಯ ಸಹಾಯಕರನ್ನು ಪಶುವೈದ್ಯಕೀಯ ಪರೀಕ್ಷಕರಾಗಿ ಮುಂಬಡ್ತಿ ನೀಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಭಾರಿ ವಾಹನ ಚಾಲನೆ ಪರವಾನಗಿ ಪಡೆದ 10 ಡಿ-ದರ್ಜೆ ನೌಕರರನ್ನು ವಾಹನ ಚಾಲಕರಾಗಿ ಮುಂಬಡ್ತಿ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

1384 ಡಿ ದರ್ಜೆ ನೌಕರರನ್ನು ಬೇರೆ ಇಲಾಖೆಯಿಂದ ಮರುವಿನ್ಯಾಸದ ಮೂಲಕ ಹಾಗೂ ಅನುಕಂಪಾರ್ಥದ ನೌಕರಿಯ ಮೂಲಕ ಭರ್ತಿ ಮಾಡಲಾಗುತ್ತಿದೆ.

**4650 (3832) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ)** :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಂದಾಜು ಕ್ಷೌರಿಕ ಜನಾಂಗದ ಜನ ಸಂಖ್ಯೆ ಎಷ್ಟು;

ಆ) ಈ ಸಮುದಾಯವನ್ನು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸಿದೆಯೇ;

ಇ) ಇಲ್ಲದಿದ್ದಲ್ಲಿ, ಕಾರಣಗಳೇನು?

**ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)** :

ಅ) ರಾಜ್ಯದಲ್ಲಿರುವ ಕ್ಷೌರಿಕ ಜನಾಂಗದ ಜನಸಂಖ್ಯೆ 2,38,093.

ಆ) ಇಲ್ಲ.

ಇ) ಸವಿತಾ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸವಿತಾ ಸಮಾಜದ ಸಂಘಗಳ ವತಿಯಿಂದ ಮನವಿಗಳು ಬಂದಿರುತ್ತವೆ. ಈ ವಿಷಯವು ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಪರಿಶೀಲನೆಯಲ್ಲಿರುತ್ತದೆ.

**4651 (5005) ಶ್ರೀ ಕೃಷ್ಣಮೂರ್ತಿ ಕೆ.ಎ. (ಕಡೂರು)** :– ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಸಣ್ಣ ಕೈಗಾರಿಕೆಗಳಿಗೆ ಸಹಾಯಧನ ನೀಡುವ ವಿಚಾರದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾದ ಸಹಾಯಧನ ಬಾಕಿ ಎಷ್ಟು;

ಆ) ಕೋಳಿ ಸಾಕಾಣಿಕೆಯ ಉದ್ಯಮಕ್ಕೆ ಸಹಾಯಧನ ನೀಡದಿರುವುದಕ್ಕೆ ಕಾರಣವೇನು; ಕಡೂರು ತಾಲ್ಲೂಕಿನಲ್ಲಿ ಇನ್ನು ಎಷ್ಟು ಕೋಳಿ ಸಾಕಾಣಿಕೆ ಉದ್ಯಮಗಳಿಗೆ ಸಹಾಯಧನ ನೀಡಬೇಕಾಗಿದೆ?

**ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)** :

ಅ) ದಿನಾಂಕ : 31–3–2005ರ ಅಂತ್ಯಕ್ಕೆ ಚಿಕ್ಕಮಗಳೂರು ಜಿಲ್ಲೆಯ 355 ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾದ ಸಹಾಯಧನದ ಬಾಕಿ ಮೊತ್ತ ರೂ. 3.94 ಕೋಟಿ.

ಆ) ಕೋಳಿ ಸಾಕಾಣಿಕೆ ಉದ್ಯಮಕ್ಕೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ಒಟ್ಟು ಹೂಡಿದ ಸ್ಥಿರಾಸ್ತಿ ಮೇಲೆ ಶೇ.25 ಸಹಾಯಧನ ನೀಡುವ ಯೋಜನೆಯನ್ನು ಹೊಸ ಕೈಗಾರಿಕೆ ನೀತಿ 2001–06ರಡಿ ಸಹಾಯಧನ ಯಲ್ಲಿ ಸಹಾಯಧನ ಮಂಜೂರಾತಿ ನೀಡುವ ಸೌಲಭ್ಯವನ್ನು ನಿಲ್ಲಿಸಲಾಗಿದೆ.

ಕಡೂರು ತಾಲ್ಲೂಕಿನಲ್ಲಿ 8 ಕೋಳಿ ಸಾಕಾಣಿಕೆ ಘಟಕಗಳಿಗೆ ರೂ.8.26 ಲಕ್ಷಗಳ ಸಹಾಯಧನವನ್ನು ಬಿಡುಗಡೆ ಮಾಡಲು ಬಾಕಿಯಿರುತ್ತದೆ. ಸಹಾಯಧನ ಮಂಜೂರಾದ ಕೋಳಿ ಸಾಕಾಣಿಕೆ (ಲೇಯರ್) ಘಟಕಗಳಿಗೆ ಅಗಸ್ಟ್ 2005ರ ಅಂತ್ಯದೊಳಗೆ ಬಿಡುಗಡೆ ಮಾಡಲಾಗುವುದು.

**4652 (5006) ಶ್ರೀ ಕೃಷ್ಣಮೂರ್ತಿ ಕೆ. ಎಂ. (ಕಡೂರು)** :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ತಾಲ್ಲೂಕು ಬಿಳುವಾಲು ಅಮೃತಮಹಲ್ ಕಾವಲ್ ಪ್ರದೇಶವನ್ನು ಅನಧಿಕೃತವಾಗಿ ಒತ್ತುವರಿ ಮಾಡಿದ್ದು, ಸದರಿ ಪ್ರದೇಶವನ್ನು ತೆರವು ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು, ಮಾಹಿತಿ ನೀಡುವುದು;